# ಸುದ್ದಿಸಂಚಯ

## ಹೊಸ ದೆಹಲಿಯ ಶ್ರೀರಾಮಕೃಷ್ಣ ಮಂದಿರದ ಸುವರ್ಣ ಜಯಂತಿ

ರಾಮಕೃಷ್ಣ ಮಿಷನ್, ಹೊಸ ದೆಹಲಿಯ ಶ್ರೀರಾಮಕೃಷ್ಣ ಮಂದಿರದ ಸುವರ್ಣ ಜಯಂತಿ ಇತ್ತೀಚೆಗೆ ಆಚರಿಸಲ್ಪಟ್ಟಿತು. ಈ ಕಾರ್ಯಕ್ರಮಗಳಲ್ಲಿ ಬಹುಸಂಖ್ಯೆಯಲ್ಲಿ ಸಂನ್ಯಾಸಿಗಳು, ಭಕ್ತರು ಮತ್ತು ಹಿತೈಷಿಗಳು ಪಾಲ್ಗೊಂಡರು. ಉತ್ಸವಗಳು ೯ ನೇ ನವಂಬರ್ ರಾತ್ರಿಯಂದು ಶ್ರೀಕಾಳಿಮಾತೆಯ ಪೂಜೆಯೊಂದಿಗೆ ಆರಂಭಗೊಂಡವು. ನವೆಂಬರ್ ೧೬ ರಂದು ರಾಮಕೃಷ್ಣ ಮಹಾಸಂಘದ ಹಿಂದಿನ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮಿ ಗಹನಾನಂದಜಿಯವರ ಸ್ಮರಣಾರ್ಥ ವಿಶೇಷ ಪೂಜೆ ನಡೆಯಿತು. ಅಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಮುಂದಿನ ಐದು ದಿನಗಳ ಕಾಲ ನಡೆದ ಉತ್ಸವಗಳಲ್ಲಿ ಅನೇಕ ಪ್ರಸಿದ್ಧ ಸಂಗೀತ ಮತ್ತು ನೃತ್ಯ ತಂಡಗಳು ಭಾಗವಹಿಸಿದ್ದವು. ಅವುಗಳಲ್ಲಿ ಶ್ರೀ ಕೃಷ್ಣ, ಕಾಕಿನಾಡ ಅವರಿಂದ ವಾದ್ಯಸಂಗೀತ, ಶ್ರೀಮತಿ ವಾಣಿ ಜಯರಾಮ್, ಬುದ್ಧದೇವ್ ಮುಖ್ಯೋಪಾಧ್ಯಾಯ್ ಮತ್ತು ಪ್ರೇರಣಾ ಅರೋರ ಅವರಿಂದ ಭಜನೆಗಳು, ಸತ್ಕಲಾ ವಾಹಿನಿ, ಕಾಕಿನಾಡ ಅವರಿಂದ ನಡೆದ ಸರ್ವದೇವತಾ ದರ್ಶನ ದೃಶ್ಯ ಮುಂತಾದವು ಮುಖ್ಯವಾದವು. ಅದಲ್ಲದೆ, ಕಲಾಪಿನಿ ಕೊಂಕಲಿ (ಪಂಡಿತ ಕುಮಾರ ಗಂಧರ್ವರವರ ಪುತ್ರಿ) ಮತ್ತು ಸುಭದ್ರಾ ದೇಸಾಯಿಯವರಿಂದ ಏರ್ಪಡಿಸಿದ್ದ ಹಿಂದೂಸ್ತಾನಿ ಗಾಯನ ಕೂಡ ಕೇಳುಗರ ಮನಸೆಳೆದವು. ಒಂದು ದಿನ ಸ್ವಾಮಿ ನಿಖಿಲಾತ್ಮಾನಂದರು 'ರಾಮಚರಿತ ಮಾನಸ' ದ ವ್ಯಾಖ್ಯಾನ ಮಾಡಿದರು.

೧೭ ನೆಯ ತಾರೀಖಿನಂದು ಯುವಜನತೆಗಾಗಿ 'ಉದ್ಯೋಗ ಸಾಧ್ಯತೆ ಮತ್ತು ಚಾರಿತ್ರ್ಯ ನಿರ್ಮಾಣ', 'ಒತ್ತಡ ನಿರ್ವಹಣೆ', ' ಧ್ಯಾನ' – ಮುಂತಾದ ವಿಷಯಗಳ ಬಗ್ಗೆ ಪ್ರವಚನಗಳು, ಚರ್ಚಾಕೂಟಗಳು ನಡೆದವು. ೧೮ನೆಯ ತಾರೀಖು ದೆಹಲಿಯ ಹತ್ತಿರದ ಫರೀದಾಬಾದಿನಲ್ಲಿ ದರಿದ್ರನಾರಾಯಣ ಸೇವೆಯನ್ನು ನಡೆಸಲಾಯಿತು. ಕಡೆಯ ದಿನ ಅಂದರೆ, ೨೦ ನೇ ನವಂಬರ್ ನಂದು ಬೆಳಿಗ್ಗೆ 'ಭಕ್ತರ ಸತ್ಸಂಗ'ವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ, 'ಭಗವಂತನ ಪೂಜೆಯಾಗಿ ಸೇವೆ' ಬಗ್ಗೆ ವಿಚಾರ ಸಂಕಿರಣ, 'ದೇವಾಲಯ ವಾಸ್ತು ವಿನ್ಯಾಸ' ಮತ್ತು 'ನಮ್ಮ ದೈನಂದಿನ ಜೀವನದಲ್ಲಿ ದೇವಸ್ಥಾನಗಳ ಪಾತ್ರ' – ಈ ವಿಷಯಗಳ ಮೇಲೆ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಸಂಜೆ ಹೈದರಾಬಾದಿನ ಪೇರಿಣಿ ತಂಡದಿಂದ ಶಿವ ತಾಂಡವ ನೃತ್ಯದೊಂದಿಗೆ ದೆಹಲಿ ಆಶ್ರಮದ, ಶ್ರೀರಾಮಕೃಷ್ಣ ಮಂದಿರದ ಸುವರ್ಣ ಜಯಂತಿ ಉತ್ಸವ ಸಮಾಪ್ತಗೊಂಡಿತು.

ಉತ್ಸವದ ಅಂಗವಾಗಿ ಆಶ್ರಮದ ಹತ್ತಿರವೇ ಇರುವ ಮೆಟ್ರೋ ರೈಲ್ವೇ ಸ್ಟೇಷನ್ನಿನಲ್ಲಿ ಶ್ರೀರಾಮಕೃಷ್ಣರ ಚಿತ್ರದೊಡನೆ, ಸರ್ವಧರ್ಮ ಸಮಭಾವವನ್ನು ಚಿತ್ತರಿಸುವ ೧೦ ಅಡಿ ಉದ್ದಗಲವಿರುವ ಬೃಹತ್ ವರ್ಣ ಚಿತ್ರವನ್ನು, ರೈಲ್ವೇ ಅಧಿಕಾರಿಗಳು ಸ್ಥಾಪಿಸಿದ್ದಾರೆ. **'ಎಷ್ಟು ಮತಗಳೋ ಅಷ್ಟು ಪಥಗಳು'** ಎಂಬ ಶ್ರೀರಾಮಕೃಷ್ಣರ ವಚನವನ್ನು ಆ ವರ್ಣಚಿತ್ರದ ಎರಡೂ ಕಡೆಯೂ ಬರೆಯಲಾಗಿದೆ. ಈ ಚಿತ್ರವು ಎಲ್ಲರಿಂದ ಪ್ರಶಂಸಿಸಲ್ಪಟ್ಟಿದೆ. ■



ಯುವ ಸಮಾವೇಶ




ಭಕ್ತ ಸಮ್ಮೇಳನ



ದರಿದ್ರನಾರಾಯಣ ಸೇವೆ




ಶಿವತಾಂಡವ ನೃತ್ಯ